ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜು ಅರಸು ಟಮಕ ಕೋಲಾರ
ಇಮೇಲ್: bnuregistrar@karnataka.gov.in ದೂರವಾಣಿ :08152 243152/53

ನಂ:ಬೆಂ.ಉ.ವಿ.ವಿ/ ಗು.ಆ.& ಅ ಉ ನೇರ ನೇಮಕಾತಿ/ V 2026-27 **ದಿನಾಂಕ: 12.11.2026**

ಅಧಿಸೂಚನೆ:

ವಿಷಯ : ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಮಂಗಸಂದ್ರ ಕೋಲಾರ ಕಾಲೇಜಿಗೆ ಎಂ.ಬಿ.ಎ ,ಎಂ.ಸಿ.ಎ ಮತ್ತು ರಸಾಯನಶಾಸ್ತ್ರ, ರಾಜ್ಯಶಾಸ್ತ್ರ, ಸ್ನಾತಕೋತ್ತರ ಕೋರ್ಸುಗಳಿಗೆ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕ ಹಿರಿಯ ಅದ್ಯಾಪಕರು, ಕಿರಿಯ ಅಧ್ಯಾಪಕರು ಮತ್ತು ವಿಶ್ವವಿದ್ಯಾಲಯದ ಘಟಕ ಕಾಲೇಜಿನ ಸ್ನಾತಕ ಪದವಿಯ ಸಂವಿಧಾನದ ನೈತಿಕ ಮೌಲ್ಯಗಳು(ರಾಜ್ಯಶಾಸ್ತ್ರ)ವಿಭಾಗಕ್ಕೆ ಅತಿಥಿ ಉಪನ್ಯಾಸಕರ ನೇಮಕಾತಿಯ ನೇರ ಸಂದರ್ಶನದ (Walk- in- Interview) ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:04.11.2026

****

ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಮಂಗಸಂದ್ರ ಕೋಲಾರ ಕಾಲೇಜಿಗೆ ಎಂ.ಬಿ.ಎ ,ಎಂ.ಸಿ.ಎ ಮತ್ತು ರಸಾಯನಶಾಸ್ತ್ರ, ರಾಜ್ಯಶಾಸ್ತ್ರ, ಸ್ನಾತಕೋತ್ತರ ಕೋರ್ಸುಗಳಿಗೆ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕ ಹಿರಿಯ ಅದ್ಯಾಪಕರು, ಕಿರಿಯ ಅಧ್ಯಾಪಕರು ಮತ್ತು ವಿಶ್ವವಿದ್ಯಾಲಯದ ಘಟಕ ಕಾಲೇಜಿನ ಸ್ನಾತಕ ಪದವಿಯ ಸಂವಿಧಾನದ ನೈತಿಕ ಮೌಲ್ಯಗಳು(ರಾಜ್ಯಶಾಸ್ತ್ರ)ವಿಭಾಗಕ್ಕೆ ಅತಿಥಿ ಉಪನ್ಯಾಸಕರನ್ನು ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ನೇರ ಸಂದರ್ಶನವನ್ನು (**walk-in-interview**) ಏರ್ಪಡಿಸಲಾಗಿದೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿ.ಹೆಚ್.ಡಿ./ಎನ್.ಇ.ಟಿ./ಎಸ್.ಎಲ್.ಇ.ಟಿ. ಹೊಂದಿರಬೇಕು, ಬೋಧನಾ ಅನುಭವ ಹೊಂದಿರುವ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ (bnu.karnataka.gov.in) ಅರ್ಜಿಯನ್ನು ಡೌನ್ಲೋಡ್ ಮಾಡಿಕೊಂಡು, ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಯ ಜೊತೆಗೆ ಮೂಲ ಅಂಕಪಟ್ಟಿಗಳು, ಪದವಿ ಪ್ರಮಾಣ ಪತ್ರ, ಸೇವಾನುಭವ ಪತ್ರ, ಪಿ.ಹೆಚ್.ಡಿ./ಎನ್.ಇ.ಟಿ./ಎಸ್.ಎಲ್.ಇ.ಟಿ. ಸಂಶೋಧನಾ ಪತ್ರಿಕೆಗಳು ಹಾಗೂ ಇತರೆ ಅಗತ್ಯ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗತಕ್ಕದು.(**ದಾಖಲೆಗಳ Xerox 2 set ಗಳನ್ನು, ಸಂದರ್ಶನ ಸಮಯದಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು).**

ಗಮನಿಸ ಬೇಕಾದ ಅಂಶಗಳು

ನೇರ ಸಂದರ್ಶನ ನಡೆಯುವ ಸ್ಥಳ: : ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ , ಆಡಳಿತ ಕಛೇರಿಯ , ಸಿಂಡಿಕೇಟ್ ಸಭಾಂಗಣ ಟಮಕ ಕೋಲಾರ-563103

ವಿಷಯವಾರು ಹುದ್ದೆಗಳ ವಿವರ:

ಕ್ರ.ಸಂಖ್ಯೆ	ವಿಷಯಗಳು	ಹುದ್ದೆಗಳ ಸಂಖ್ಯೆ		ದಿನಾಂಕ & ಸಮಯ
		ಹಿರಿಯ ಅಧ್ಯಾಪಕರು	ಕಿರಿಯ ಅಧ್ಯಾಪಕರು	
01	ಎಂ.ಬಿ.ಎ	0	2	**25.11.2026 ಬೆಳಗ್ಗೆ 10.30 ಕ್ಕೆ**
02	ಎಂ.ಸಿ.ಎ	1	1	**25.11.2026 ಬೆಳಗ್ಗೆ 11.30 ಕ್ಕೆ**

ಕ್ರ.ಸಂಖ್ಯೆ	ವಿಷಯಗಳು	ಹುದ್ದೆಗಳ ಸಂಖ್ಯೆ		ದಿನಾಂಕ & ಸಮಯ
		ಪೂರ್ಣಕಾಲಿಕ	ಅರೆಕಾಲಿಕ	

01	ರಾಜ್ಯಶಾಸ್ತ್ರ,	1	1	**24.11.2026 ಬೆಳಗ್ಗೆ 10.30 ಕ್ಕೆ**
02	ಸಂವಿಧಾನದ ನೈತಿಕ ಮೌಲ್ಯಗಳು(ರಾಜ್ಯಶಾಸ್ತ್ರ, ಸ್ನಾತಕ ಪದವಿ ವಿಶ್ವವಿದ್ಯಾಲಯದ ಘಟಕ ಕಾಲೇಜು ಲಿಂಗರಾಜಪುರಂ ಬೆಂಗಳೂರು)	-	1	**24.11.2026 ಬೆಳಗ್ಗೆ 10.30 ಕ್ಕೆ**
03	ರಸಾಯನಶಾಸ್ತ್ರ,	-	1	**24.11.2026 ಬೆಳಗ್ಗೆ 11.00 ಕ್ಕೆ**

ಸೂಚನೆಗಳು

1. ಅಧ್ಯಾಪಕರು ಮತ್ತು ಅತಿಥಿ ಉಪನ್ಯಾಸಕರ ಹುದ್ದೆಯು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ, ಹಾಗೂ ಆಯಾ ಶೈಕ್ಷಣಿಕ ವರ್ಷದ ಅಂತ್ಯದವರೆಗೂ ಸೇವೆಯನ್ನು ಪಡೆಯಲಾಗುತ್ತದೆ.
2. ಆಯ್ಕೆಯಾದ ಅಧ್ಯಾಪಕರು ಮತ್ತು ಅತಿಥಿ ಉಪನ್ಯಾಸಕರು ವಿಶ್ವವಿದ್ಯಾಲಯದ ನಿಯಮಾನುಸಾರ ಸಂಭಾವನೆಯನ್ನು ನೀಡಲಾಗುವುದು. ಹಾಗೂ ಸೂಕ್ತ ಮುಚ್ಚಳಿಕೆ ಬರೆಸಿಕೊಂಡು ಆದೇಶ ನೀಡಲಾಗುವುದು.
3. ಅಧ್ಯಾಪಕರು ಮತ್ತು ಅತಿಥಿ ಉಪನ್ಯಾಸಕರು ಹಿಂದೆ ಕಾರ್ಯನಿರ್ವಹಿಸಿದ ಸಂಸ್ಥೆಯ ಮುಖ್ಯಸ್ಥರಿಂದ N.O.C ಪತ್ರವನ್ನು ಪಡೆದ್ದು, ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.
4. ಅಧ್ಯಾಪಕರು ಮತ್ತು ಅತಿಥಿ ಉಪನ್ಯಾಸಕರ ಸೇವಾ ಅನುಭವ ಪ್ರಮಾಣಪತ್ರವನ್ನು ಒದಗಿಸುವುದು.
5. ಅಧ್ಯಾಪಕರು ಮತ್ತು ಅತಿಥಿ ಉಪನ್ಯಾಸಕರ ಆಯ್ಕೆಯು ವಿಶ್ವವಿದ್ಯಾಲಯದ ನಿರ್ಧಾರ ಅಂತಿಮವಾಗಿರುತ್ತದೆ.
6. ವಿವಿಧ ವಿಷಯಗಳ ಕಾರ್ಯಬಾರಕ್ಕೆ ಅನುಗುಣವಾಗಿ ಅಧ್ಯಾಪಕರು ಮತ್ತು ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಸರ್ಕಾರದ ಮೀಸಲಾತಿಯನ್ನು ಅನುಸರಿಸಲಾಗುವುದು. ಅಭ್ಯರ್ಥಿಗಳು ಇತರೆ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್: .bnu.karnataka.gov.in ಯಿಂದ ಮಾಹಿತಿ ಪಡೆಯುವುದು.

ಕುಲಸಚಿವರು

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕ, ಕೋಲಾರ, ಕರ್ನಾಟಕ-563 103.

ಪ್ರತಿಗಳು:

1. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ-563 103.
2. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ-563 103.
3. ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ-563 103.
4. ಡೀನರು,ವಿಜ್ಞಾನ ನಿಕಾಯ, ವಾಣಿಜ್ಯ ನಿಕಾಯ, ಕಲಾ ನಿಕಾಯ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563 103..
5. ನಿರ್ದೇಶಕರು ಸ್ನಾತಕೋತ್ತರ ಕೇಂದ್ರ ಮಂಗಸಂದ್ರ ಕೋಲಾರ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಟಮಕ ಕೋಲಾರ-563103
6. ಪ್ರಾಂಶುಪಾಲರು ವಿಶ್ವವಿದ್ಯಾಲಯದ ಘಟಕ ಕಾಲೇಜು ಲಿಂಗರಾಜಪುರಂ ಬೆಂಗಳೂರು , ಬೆಂಗಳೂರು ಉತ್ತರ ವಿಶ್ವವಿದ್ಯಾಳಯ ಟಮಕ ಕೋಲಾರ-563103
7. ಐಸಿಟಿ ವಿಭಾಗ , ವೆಬ್ ಸೈಟ್ ಮಾಹಿತಿಗಾಗಿ.
8. ಕಛೇರಿ ಪ್ರತಿ.